## ವಿದುರಾಶ್ವತ್ಥದ ಘಟನೆ ಕಣ್ಣಾರೆ ಕಂಡಿದ್ದ ಅಶ್ವತ್ಥಪ್ಪ



86 ವರ್ಷಗಳ ಹಿಂದೆ ನಡೆದ ಈ ಹೋರಾಟದಲ್ಲಿ ಭಾಗಿಯಾದವರು ಈಗ ಯಾರೂ ಬದುಕಿಲ್ಲ. ಆದರೆ ದುರ್ಘಟನೆಯನ್ನು ಕಣ್ಣಾರೆ ಕಂಡವರ ಪೈಕಿ ಈಗ ಉಳಿದಿರುವ ಏಕೈಕ ಜೀವ ಗೌರಿಬಿದನೂರು ತಾಲ್ಲೂಕಿನ ವೈಚಕೂರು ಗ್ರಾಮದ ಅಶ್ವತ್ಥಪ್ಪ.

ಅಶ್ವತ್ಥಪ್ಪ 1925ರ ಜೂನ್‌ನಲ್ಲಿ ಜನಿಸಿದರು. ಅವರಿಗೆ ಈಗ 99 ವರ್ಷ. ವಿದುರಾಶ್ವತ್ಥದ ಘಟನೆ ನಡೆದಾಗ ಅವರಿಗೆ 12ರಿಂದ 13ರ ಪ್ರಾಯ.

ವಿದುರಾಶ್ವತ್ಥದಲ್ಲಿ ಬ್ರಿಟಿಷರು ನಡೆಸಿದ ಗೋಲಿಬಾರ್ ಮತ್ತು ಅವರು ನೋಡಿದ ಘಟನೆಗಳ ಬಗ್ಗೆ ಅಶ್ವತ್ಥಪ್ಪ ಹೇಳುವುದು ಹೀಗೆ.

'ಹೊಸೂರಿನಲ್ಲಿ ಮಿಡ್ಲಿಸ್ಕೂಲ್ ಓದುತ್ತಿದ್ದೆ. ಎಲ್ಲರೂ ವಿದುರಾಶ್ವತ್ಥಕ್ಕೆ ಹೋಗುತ್ತಿದ್ದರು. ನಾನೂ ಅವರ ಜತೆ ಟೋಪಿ ಹಾಕಿಕೊಂಡು ಹೋದೆ. ಈಗಿನಂತೆ ಆಗ ರಸ್ತೆಗಳೇನೂ ಇರಲಿಲ್ಲ. ನಡೆದುಕೊಂಡು ಹೋದೆವು.

ಮಧ್ಯಾಹ್ನದ ಸಮಯ. ಜನವೋ ಜನ. ದೇವಸ್ಥಾನದ ಹಿಂಬದಿಯಲ್ಲಿ ಬಯಲು. ಆ ಬಯಲಿನಲ್ಲಿ ಸಾಕಷ್ಟು ಮರಗಳು ಇದ್ದವು. ಅಲ್ಲಿ ಜಗಲಿಕಟ್ಟೆ ಸಹ ಇತ್ತು. ಜಗಲಿಕಟ್ಟೆಯಲ್ಲಿ ನಿಂತು ಭಾಷಣ ಮಾಡುತ್ತಿದ್ದರು.

ಜಗಲಿಕಟ್ಟೆಗೂ ದೇವಸ್ಥಾನದ ಕಟ್ಟೆಗೂ ನಡುವೆ ಒಂದು ರೂಂ ಇತ್ತು. ಅಲ್ಲಿ ಕಿಟಕಿಗಳು ಇದ್ದವು. ಜಾಗ ಸಾಲದೆ ಜನರು ಮರಗಳನ್ನು ಹತ್ತಿದ್ದರು. ಪೊಲೀಸರು ಲಾಠಿ ಚಾರ್ಜ್ ಮಾಡಿದರು. ಮರಗಳ ಮೇಲಿದ್ದ ಜನರು ದಪ ದಪ ಎಂದು ಬಿದ್ದರು. ಜನರು ಕಲ್ಲುಗಳನ್ನು ತೆಗೆದುಕೊಂಡು ಪೊಲೀಸರತ್ತ ಬೀಸಿದರು.

ಅಮಲ್ದಾರರು ಇರಬೇಕು ಎನಿಸುತ್ತದೆ. ಅವರು ಶೂಟ್ ಮಾಡಲು ಆರ್ಡರ್ ಕೊಟ್ಟರು. ಕಿಟಕಿಗಳಿಂದ ಪೊಲೀಸರು ಮನಬಂದಂತೆ ಗುಂಡು ಹಾರಿಸಿದರು. ಜನರು ದಪ ದಪ ಎಂದು ನೆಲಕ್ಕೆ ಉರುಳಿಬಿದ್ದರು.

ನಾನು ಹಾಗೂ ಕೆಲವರು ಎದ್ದೆವೊ ಬಿದ್ದೆವೊ ಎಂದು ಹಳ್ಳದತ್ತ (ಉತ್ತರ ಪಿನಾಕಿನಿ ನದಿ ಹರಿಯುವ ಜಾಗ) ಓಡಿದೆವು. ಹಳ್ಳದ ಕಡೆಯಿಂದ ಕದಿರೇನಹಳ್ಳಿಗೆ ಹೋಗಲು ರಸ್ತೆ ಇದೆ. ಕದಿರೇನಹಳ್ಳಿ ಸೇರಿದೆವು. ಇದಿಷ್ಟು ಮಾತ್ರ ನನಗೆ ಗೊತ್ತು.

'ಅಂದು ವಿದುರಾಶ್ವತ್ಥದಲ್ಲಿ ಜಾತ್ರೆ ನಡೆಯುತ್ತಿತ್ತೇ' ಎಂದು ಪ್ರಶ್ನಿಸಿದರೆ, ಉತ್ತರಕ್ಕೆ ಮರೆವು ಅಡ್ಡ ಬರುತ್ತದೆ. 'ನೆನಪಾಗುತ್ತಿಲ್ಲ. ಜನರು ಹೆಚ್ಚು ಸೇರಿದ್ದರು. ಮರಗಳ ಮೇಲೆಲ್ಲಾ ಹತ್ತಿದ್ದರು' ಎನ್ನುತ್ತ ಅರೆಬರೆಯಾದ ನೆನಪುಗಳನ್ನು ಒಗ್ಗೂಡಿಸಿ ಮಾತನಾಡುವರು.

ರಸ್ತೆಯಿಂದ ವಿದುರ ನಾರಾಯಣಸ್ವಾಮಿ ಸ್ವಾಗತ ಕಮಾನು ದಾಟಿ ಒಂದು ಕಿ.ಮೀ. ಸಾಗಿದರೆ ಸ್ವಾತಂತ್ರ್ಯ ಹೋರಾಟದ ಕಥನ ಬಿಚ್ಚಿಕೊಳ್ಳುತ್ತದೆ.

ಪ್ರತಿ ವರ್ಷದ ಸ್ವಾತಂತ್ರ್ಯ ದಿನದ ಸಮಯದಲ್ಲಿ ವಿದುರಾಶ್ವತ್ಥದ ಹೋರಾಟಗಳನ್ನು ಸ್ಮರಿಸಲಾಗುತ್ತದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವ ಸೇರಿದಂತೆ ರಾಜ್ಯದಲ್ಲಿ ನಡೆಯುವ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಈ ನೆಲದಿಂದಲೇ ಚಾಲನೆ ನೀಡಿದ ನಿದರ್ಶನಗಳಿವೆ.

ವಿದುರಾಶ್ವತ್ಥದಲ್ಲಿ ಪ್ರಾಣ ತೆತ್ತವರ ಸ್ಮರಣಾರ್ಥ 1973ರ ಅ.2ರಂದು 'ಹುತಾತ್ಮರ ಸ್ಮಾರಕ' ನಿರ್ಮಿಸಲಾಗಿದೆ. ಈ ಸ್ಮಾರಕದಲ್ಲಿ ಬಲಿದಾನಗೈದ ಎಂಟು ಮಂದಿಯ ಹೆಸರನ್ನು ಮಾತ್ರ ದಾಖಲಿಸಲಾಗಿದೆ. ಕೆಲವು ಹೋರಾಟಗಾರರ ಭಾವಚಿತ್ರಗಳು ನಾಗಯ್ಯರೆಡ್ಡಿ ಭವನದಲ್ಲಿವೆ.

ಐತಿಹಾಸಿಕ ಹೋರಾಟ ನಡೆದ ಸ್ಥಳದಲ್ಲಿ ಈಗ ಸ್ವಾತಂತ್ರ್ಯ ಸ್ಮಾರಕ ಸಂಕೀರ್ಣ ಮತ್ತು ವಿದುರಾಶ್ವತ್ಥ ಉದ್ಯಾನ ನಿರ್ಮಾಣವಾಗಿದೆ. ಈ ಸಂಕೀರ್ಣದಲ್ಲಿ ವೀರಸೌಧ, ಚಿತ್ರಪಟ ಗ್ಯಾಲರಿ, ನಾಗಯ್ಯರೆಡ್ಡಿ ಭವನ, ಗ್ರಂಥಾಲಯ, ಸುಂದರ ಉದ್ಯಾನ, ಸ್ವಾತಂತ್ರ್ಯ ಹೋರಾಟಗಾರರ ಮೂರ್ತಿಗಳನ್ನು ಕಾಣಬಹುದು.

ಬಹುತೇಕ ಸ್ವಾತಂತ್ರ್ಯ ಹೋರಾಟಗಳು 'ನಾಯಕ'ನ ನೇತೃತ್ವದಲ್ಲಿ ನಡೆದಿವೆ. ಆದರೆ ವಿದುರಾಶ್ವತ್ಥ ಹೋರಾಟವು ಜನಸಾಮಾನ್ಯರ ಹೋರಾಟ. ಈ ಕಾರಣದಿಂದಲೇ ಚರಿತ್ರೆಯಲ್ಲಿ ವಿಶಿಷ್ಟವಾಗಿ ನಿಲ್ಲುತ್ತದೆ.

ವಿದುರಾಶ್ವತ್ಥ ಹೋರಾಟದಲ್ಲಿ ಹುತಾತ್ಮರಾದವರ ಮನೆಯ ಗೋಡೆಗಳಲ್ಲಿರುವ ದೇವರ ಚಿತ್ರಪಟಗಳ ಸಾಲಿನಲ್ಲಿ 'ಸ್ವಾತಂತ್ರ್ಯ ಹೋರಾಟಗಾರರು' ಎಂದು ಸರ್ಕಾರ ನೀಡಿದ ಪ್ರಮಾಣ ಪತ್ರವಿದೆ. ■

# ರೈತಕ್ರಾಂತಿಯ ಕಯ್ಯೂರು

## ಸಮಾನತೆಯ ಕನಸಿಗೆ ಪ್ರೇರಣೆ

**ಕಯ್ಯೂರಿನಲ್ಲಿ ನಡೆದ ರೈತ ಕ್ರಾಂತಿ ಜಮೀನ್ದಾರಿ ಪದ್ಧತಿಯ ವಿರುದ್ಧದ ಹೋರಾಟವಾಗಿರುವುದರ ಜೊತೆಗೆ, ಸ್ವಾತಂತ್ರ್ಯ ಮತ್ತು ಸ್ವರಾಜ್ಯದ ಹಂಬಲವನ್ನೂ ಒಳಗೊಂಡಿತ್ತು.**

■ ಮುನೀರ್ ಕಾಟಿಪಳ್ಳ

ಪ್ರಸ್ತುತ ಕಾಸರಗೋಡು ಜಿಲ್ಲೆಗೆ ಸೇರಿರುವ ಕಯ್ಯೂರು ಪ್ರಸಿದ್ಧ ಪ್ರವಾಸಿ ತಾಣವೇನಲ್ಲ. ಆದರೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನಡೆದ ಕ್ರಾಂತಿಯೊಂದು ಈ ಊರಿಗೆ ವಿಶೇಷ ಮಹತ್ವ ತಂದುಕೊಟ್ಟಿದೆ. ಕೃಷಿ ಪ್ರಧಾನವಾದ ಕಯ್ಯೂರಿನಲ್ಲಿ ಜಮೀನ್ದಾರಿ ಕುಟುಂಬಗಳೆರಡು ಕೃಷಿಕಾರ್ಮಿಕರನ್ನು ಶೋಷಿಸುತ್ತಿದ್ದ ಸಂದರ್ಭದಲ್ಲಿ, ರೈತರು ಅಹಿಂಸಾತ್ಮಕವಾಗಿ ಪ್ರತಿಭಟನೆ ನಡೆಸಿದ ಘಟನೆಯಿದು.

ಕಯ್ಯೂರು ಅವಿಭಜಿತ ಕೆನರಾ ಜಿಲ್ಲೆಗೆ ಸೇರಿದ್ದ ಸಮಯವದು. ಜಮೀನ್ದಾರರ ಶೋಷಣೆಯನ್ನು ಮಾತಿಲ್ಲದೆ ಒಪ್ಪಿಕೊಂಡಿದ್ದ ಊರಿನ ಜನರಲ್ಲಿ, ಅವರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಿದವರು ಕಯ್ಯೂರು ಶಾಲೆಗೆ ಬಂದ ಒಬ್ಬರು ಮಾಸ್ತರರು. ಕಮ್ಯುನಿಸ್ಟ್ ವಿಚಾರಧಾರೆಯಿಂದ ಪ್ರಭಾವಿತರಾಗಿದ್ದ ಮಾಸ್ತರರು, ಶ್ರಮದ ಬೆಲೆ, ಸಂಪತ್ತಿನ ಸಮಾನ ಹಂಚಿಕೆ, ಮಾನವ ಹಕ್ಕುಗಳ ಬಗ್ಗೆ ಊರಿನ ಜನರಿಗೆ ತಿಳಿಹೇಳುತ್ತ ಬಂದರು. ಊರಿನ ಯುವಜನತೆಗೆ ಪತ್ರಿಕೆಗಳನ್ನು ಓದಿ ಹೇಳುತ್ತ, ಅವರೂ ಪತ್ರಿಕೆಗಳನ್ನು ಓದಿ ವೈಚಾರಿಕತೆಯನ್ನು ಬೆಳೆಸಿಕೊಳ್ಳುವಂತೆ ಪ್ರೋತ್ಸಾಹ ನೀಡಿದರು. ಮೌಢ್ಯಗಳಿಂದ ಮುಕ್ತವಾಗುವ, ಜೀವನ ಸುಧಾರಣೆಯ ಪಾಠ ಮಾಡಿದರು. ಅಲ್ಲಿನ ಜನರಿಗೆ ಒದಗಿಸಬೇಕಾದ ಮೂಲಸೌಕರ್ಯಗಳು, ವೇತನ ಮುಂತಾದವುಗಳ ಕುರಿತು ನಡೆಯುವ ಚರ್ಚೆಗೆ ಸರಿಯಾದ ದಿಕ್ಕು ನೀಡಿದರು.

'ಉಳುವವನೆ ಹೊಲದೊಡೆಯ', 'ಜಮೀನ್ದಾರಿ ಪದ್ಧತಿ ಅಳಿಸಿ ಹೋಗಲಿ, ಸಾಮ್ರಾಜ್ಯಶಾಹಿ ನಿರ್ನಾಮವಾಗಲಿ' ಎಂಬ